## ಕನಸು

ಕಣ್ಣುರೆಪ್ಪೆಯ ಒಳಗೆ
ನಿದ್ದೆ ಬಳುವಳಿಗೆ
ಕಣ್ಣು ತೆರೆದು ಹುಡುಕಲಾಗದು

## ಮದಿರೆ

ಬಾರದೆ ಸವಾರಿ
ಏರುವುದು ಕುದುರೆ
ಲಂಗುಂಟು ಲಗಾಮಿಲ್ಲ
ಯಾವಾಗ, ಹೇಗೆ, ಎಲ್ಲಿ
ನಿಲ್ಲಿಸುವುದೋ ಗೊತ್ತಿಲ್ಲ

## ಪುಢಾರಿ

ಆಭಾರಿ ಈ ಬಾರಿ
ಅವನಿಗೆ ಬೇಕಾದಾಗ
ಪ್ರಜಾ ಪ್ರಭಾರಿ
ನಮಗೆ ಬೇಕಾದಾಗ
ಬಲು ದುಬಾರಿ

## ಪಕ್ಷಾಂತರ

ಇಲ್ಲೀಥರ..ಆದರೆ..
ಅಲ್ಲೊಂಥರ
ಕುರ್ಚಿ, ಪವರ್ರು
ಅಯಸ್ಕಾಂತ ಅಂತಾರೆ
ಅದ್ಕೇ ಸ್ವಾಭಾವಿಕ
ಆಗಿಬಿಟ್ಟಿದೆ ಪಕ್ಷಾಂತರ

## ಆತಂಕವಾದ

ಯಾರದ್ದೋ ವಿತಂಡವಾದ
ಮತ್ಯಾರೋ ಅದಕೆ ದಾರಿಯಾದ
ಜನಸಾಮಾನ್ಯ ಇದಕೆ ಬಲಿಯಾದ
ಕೊನೆಗೆ ರಾಜಕಾರಣಿಗೇ ಬಹು ಫಾಯದ

## ಸಂಸಾರ

ಎಲ್ಲ ಸರಿಯಾದರೆ - ಸಂಸಾರ
ಅಲ್ಪ, ಸ್ವಲ್ಪ ಸರಿಯಿದ್ದರೆ - someಸಾರ
ಏನೂ ಸರಿಯಿಲ್ಲವಾದರೆ - ಸಂಹಾರ

## ಎಂಮ್ಮೆಲ್ಲೆ

ಎಮ್ಮೆ ಎಲ್ಲೇ?
ಕೇಳಿದಳು ಗೆಳತಿ, ಹೇಳಿದೆ
ವಿಧಾನಸೌಧವ ತೋರುತ್ತಾ
ಕಟ್ಟಿಹಾಕಿದ್ದೇನಲ್ಲಾ ಅಲ್ಲೇ

## ಒಂದೇ ಪದ

ಕತ್ತೆ, ಕಿರುಬ, ಹಂದಿ,
ರಣಹದ್ದು, ಕಾಗೆ, ರೋಗಿ
ಮಾಸ್ತರು ಹೇಳಿದರು ಮಕ್ಕಳನ್ನು ಕೇಳುತ್ತಾ
ಈ ಎಲ್ಲ ಗುಣಕೆ ಹೊಂದುವ ಒಂದು
ಪ್ರಾಣಿಯ ಹೆಸರು ಹೇಳಿ,
ಮಕ್ಕಳೆಲ್ಲ ಕೂಗಿ ಹೇಳಿದರು
'ರಾಜಕಾರಣಿ'